■ ಹನಿ

## ಶಹಬ್ಬಾಸ್ ಸಿಂಧು



ಹೈದರಾಬಾದ್‌ನ ಇನ್ನೂ 17ರ ಹರೆಯದ ಬಾಲೆ ಪಿ.ವಿ.ಸಿಂಧು (ಬರ್ತ್‌ಡೇ 5/7/1995) ಬ್ಯಾಡ್ಮಿಂಟನ್‌ನಲ್ಲಿ ಹೊಸ ದಾಖಲೆ ಬರೆಯುವತ್ತ ದಾಪುಗಾಲು ಇಟ್ಟಿದ್ದಾಳೆ. ಕಳೆದ ವಾರ ಮಲೇಷ್ಯಾ ಗ್ರ್ಯಾನ್‌ಪ್ರಿ ಗೋಲ್ಡ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದು ಇಡೀ ಜಗತ್ತೇ ತನ್ನತ್ತ ನೋಡುವಂತೆ ಮಾಡಿದ್ದಾಳೆ. ಈ ವರ್ಷದ ಆರಂಭದಲ್ಲಿ ಚೀನಾದ ಒಲಿಂಪಿಕ್ ಚಾಪಿಯನ್ ಲೀ ಕ್ಸೂ ಳನ್ನು ಸೋಲಿಸಿದಾಗಲೇ ಸಿಂಧು ಬಗ್ಗೆ ಕ್ರೀಡಾರಂಗದಲ್ಲಿ ಹೊಸ ನಿರೀಕ್ಷೆ ಮೂಡಿತ್ತು. ಇನ್ನೀಗ ಸೈನಾ ನೆಹ್ವಾಲ್ ಎಂಬ ತಾರೆಯ ಜತೆಗೆ ಸಿಂಧು ಹೆಸರನ್ನೂ ಭಾರತೀಯರು ಹೆಮ್ಮೆಯಿಂದ ಹೇಳಬಹುದು.

ಒಳ್ಳೆಯ ಕೋಚ್ ಮತ್ತು ಸತತ ಪರಿಶ್ರಮ ಎರಡೂ ಇದ್ದರೆ ಏನೆಲ್ಲವನ್ನೂ ಸಾಧಿಸಬಹುದು ಎನ್ನುವುದಕ್ಕೆ ಸಿಂಧು ಸಾಕ್ಷಿ. ಪುಲ್ಲೇಲ ಗೋಪಿಚಂದ್ ಅವರ ಬ್ಯಾಡ್ಮಿಂಟನ್ ಅಕಾಡೆಮಿ ಸೇರಿದ ಬಳಿಕ ಸಿಂಧು ಆಟದ ಗತಿಯೇ ಬದಲಾಗಿದೆ. 'ಏನೇ ಆದರೂ ಧೃತಿಗೆಡದ ಮಾನಸಿಕ ದೃಢತೆ ಈಕೆಯ ಆಸ್ತಿ' ಎಂದು ಗೋಪಿಚಂದ್ ಬೊಟ್ಟು ಮಾಡಿದ್ದಾರೆ. 5 ಅಡಿ 10 ಇಂಚು ಎತ್ತರ ಇರುವುದೂ ಈಕೆಯ ಹೊಡೆತಗಳಿಗೆ ಅಧಿಕ ಮೊನಚು ಒದಗಿಸಿದೆ. ಪ್ರತಿದಿನ 56 ಕಿ.ಮೀ ದೂರದ ಮನೆಯಿಂದ ಹೊರಟು ಬೆಳಿಗ್ಗೆ ಏಳು ಗಂಟೆಗೆಲ್ಲ ಈಕೆ ತರಬೇತಿ ಕೇಂದ್ರ ತಲುಪುತ್ತಿದ್ದಳೆಂದರೆ ಈಕೆಯ ಶ್ರದ್ಧೆ ಎಷ್ಟಿತ್ತು ಎನ್ನುವುದು ಗೊತ್ತಾಗುತ್ತದೆ. ಸೈನಾ ಸದ್ಯಕ್ಕೆ ವಿಶ್ವದ ನಂಬರ್ 2 ಆಟಗಾರ್ತಿಯಾಗಿದ್ದರೆ, ಸಿಂಧು ನಂಬರ್ 13ರಲ್ಲಿದ್ದಾಳೆ. ಈ ವರ್ಷದ ಕೊನೆಗೆ ವರ್ಷದ ಟಾಪ್ ಟೆನ್ ಪಟ್ಟಿಗೆ ಈಕೆ ಏರುವುದು ಖಚಿತ. ಮುಂದಿನ ವಾರ ನಡೆಯುವ ಸುದಿರ್ಮನ್ ಕಪ್ ಈ ನಿಟ್ಟಿನಲ್ಲೊಂದು ಪರೀಕ್ಷೆಯೇ ಸರಿ. ●

## ಮಿಲಿಂದ್ ಮದುವೆ



ಭಾರತದ ಮಾಡೆಲಿಂಗ್ ಕ್ಷೇತ್ರದಲ್ಲಿ ಸಾಕಷ್ಟು ಪುರುಷ ರೂಪದರ್ಶಿಗಳು ಈಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಮಾಡುತ್ತಿದ್ದಾರೆ. ಆದರೆ 10-15 ವರ್ಷಗಳ ಹಿಂದೆ ಮೊದಲ ಬಾರಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪುರುಷ ಮಾಡೆಲಿಂಗ್ ಕ್ಷೇತ್ರದಲ್ಲಿ ಸುದ್ದಿ ಮಾಡಿದಾತ ಈ ಮಿಲಿಂದ್ ಸೋಮನ್. ಈತ ಇವತ್ತಿಗೂ 'ಭಾರತದ ಮೊದಲ ಸೂಪರ್ ಮಾಡೆಲ್.' ಇದೀಗ ತನ್ನ ಮೂರನೇ ಸಂಬಂಧದ ವಿಷಯದಲ್ಲಿ ಮಿಲಿಂದ್ ಸಾಕಷ್ಟು ವಿವಾದ ಎಬ್ಬಿಸಿದ್ದಾನೆ. 48ರ ಹರೆಯದ ಮಿಲಿಂದ್ (ಬರ್ತ್‌ಡೇ 4/11/1965) 26ರ ಹರೆಯದ ಮಾಡೆಲಿಂಗ್ ಬೆಡಗಿ ಸಹನಾ ಗೋಸ್ವಾಮಿಯ ಜತೆಗೆ ಕಳೆದ 3 ವರ್ಷಗಳಿಂದ ನಡೆಸುತ್ತಿರುವ 'ಲಿವಿಂಗ್ ಟುಗೆದರ್' ಸಂಸಾರ ಮುರಿದು ಬಿದ್ದಿದೆಯಂತೆ. 'ಇಲ್ಲ, ಹಾಗೇನೂ ಆಗಿಲ್ಲ. ನಮ್ಮ ನಡುವೆ ಭಿನ್ನಮತ ಇರುವುದು ನಿಜ. ಆದರೆ ಒಂದೇ ಮನೆಯಲ್ಲಿದ್ದೇವೆ' ಎಂದು ಮಿಲಿಂದ್ ಸಂದರ್ಶನದಲ್ಲಿ ಸ್ಪಷ್ಟೀಕರಣ ಕೊಟ್ಟಿದ್ದಾನೆ. ಅಗಾಧ ವಯಸ್ಸಿನ ಅಂತರವಿರುವ ಈ ಯಶಸ್ವಿ ಜೋಡಿಯ ಮೇಲೆ ಸಾಕಷ್ಟು ಕುತೂಹಲದ ಕಣ್ಣುಗಳಿವೆ.

'ಸ್ಟೀಲ್ ಬಾಡಿ' ಎಂದೇ ಕರೆಸಿಕೊಳ್ಳುವ ಸ್ಫುರದ್ರೂಪಿ ಮಿಲಿಂದ್‌ನದ್ದು ಬಹುಮುಖೀ ವ್ಯಕ್ತಿತ್ವ. ಮರಾಠಿ ಬ್ರಾಹ್ಮಣ ಕುಟುಂಬದ ಕುಡಿ ಮಿಲಿಂದ್ ಹುಟ್ಟಿದ್ದು ಸ್ಕಾಟ್ಲೆಂಡ್‌ನಲ್ಲಿ, ಬೆಳೆದದ್ದು ಇಂಗ್ಲೆಂಡ್‌ನಲ್ಲಿ. ಹೆತ್ತವರು ಭಾರತಕ್ಕೆ ಬಂದ ಬಳಿಕ ಮುಂಬೈ ವಾಸ. ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವಿ ಪಡೆದ ಬಳಿಕ ಈತ ಗಮನ ಹರಿಸಿದ್ದು ಈಜುಗಾರಿಕೆಯತ್ತ. ಒಂದು ಹಂತದಲ್ಲಿ ರಾಷ್ಟ್ರೀಯ ಈಜು ಸ್ಪರ್ಧೆಗಳಲ್ಲಿ ಭಾಗವಹಿಸಿ ಪದಕ ಗೆದ್ದಾತ, ಅಲ್ಲಿಂದ ಮಾಡೆಲಿಂಗ್‌ಗೆ ಬಂದ. ಬಳಿಕ ಸಿನಿಮಾ, ಟೀವಿ ಷೋ, ಮ್ಯೂಸಿಕ್ ಆಲ್ಬಂ ಸುತ್ತಾಟ. ಗಾಯಕಿ ಅಲಿಷಾ ಚಿನಾಯ್‌ಳ ಅತ್ಯಂತ ಜನಪ್ರಿಯ 'ಮೇಡ್ ಇನ್ ಇಂಡಿಯಾ' ಆಲ್ಬಂನಲ್ಲಿ ಮಿಲಿಂದ್‌ನದ್ದೇ ಪ್ರಮುಖ ಪಾತ್ರ. 23ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದರೂ 2007ರಲ್ಲಿ ಬಂದ 'ಬೇಜಾ ಫ್ರೈ' ಎಂಬ ಸಿನಿಮಾ ಬಿಟ್ಟರೆ ಬೇರ್‍ಯಾವುದೂ ಹಿಟ್ ಆಗಲಿಲ್ಲ. ಆದರೆ ಟೀವಿಯಲ್ಲಿ 'ಎ ಮೌತ್‌ಫುಲ್ ಆಫ್ ಸ್ಕೈ' ಮತ್ತು 'ಸೀ ಹಾಕ್ಸ್' ಸಾಹಸ ಸರಣಿಯನ್ನು ನಡೆಸಿಕೊಡುವ ಮೂಲಕ ಬೇಜಾನ್ ಜನಪ್ರಿಯತೆ ಗಳಿಸಿದ್ದಾನೆ.

ಮಿಲಿಂದನ ಮೊದಲ ಬಾಳಗೆಳತಿ ಮಧು ಸಪ್ರೆ. ಈ ಇಬ್ಬರೂ ಸೂಪರ್ ಮಾಡೆಲ್‌ಗಳು ಟಫ್ ಶೂ ಕಂಪೆನಿಯ ಜಾಹೀರಾತಿನಲ್ಲಿ ಪೂರ್ತಿ ಬೆತ್ತಲೆಯಾಗಿ ಅರೆಬರೆ ಚಿರತೆ ಚರ್ಮ ಹೊದ್ದು ಕಾಣಿಸಿಕೊಂಡದ್ದು ದೊಡ್ಡ ವಿವಾದ ಸೃಷ್ಟಿಸಿತ್ತು. ಕೋರ್ಟ್‌ನಲ್ಲಿ 14 ವರ್ಷಗಳ ಕಾಲ ಮೊಕದ್ದಮೆ ನಡೆದ ಬಳಿಕ ಇಬ್ಬರೂ ಖುಲಾಸೆಯಾದರು. ಈ ಮಧ್ಯೆ ಮಧು ಸಪ್ರೆಯನ್ನು ಕೈಬಿಟ್ಟ ಮಿಲಿಂದ್ ಫ್ರೆಂಚ್ ತಾರೆ ಮೈಲೀನ್‌ಳನ್ನು ಮದುವೆಯಾದ. 3 ವರ್ಷಗಳ ಬಳಿಕ ಆ ಸಂಬಂಧವೂ ಹಳಸಿ, 2009ರಲ್ಲಿ ಸಹನಾ ಜತೆ ಸೇರಿದ್ದಾನೆ. ಇಬ್ಬರ ನಡುವಣ ಭಿನ್ನಮತ ಎಲ್ಲಿಗೆ ತಲುಪುತ್ತೋ ನೋಡಬೇಕು. ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65